# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1094 |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 18-12-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಳೆದ 03 ವರ್ಷಗಳಲ್ಲಿ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಮಾಡಿದ ಗುತ್ತಿಗೆದಾರರು ಮತ್ತು ಕಂಪನಿಗಳು ಯಾವುವು (ವಿವರ ನೀಡುವುದು) | ಕಳೆದ 03 ವರ್ಷಗಳಲ್ಲಿ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಮತ್ತು ನಿರ್ವಹಣೆಯನ್ನು ಮಾಡಿದ ಗುತ್ತಿಗೆದಾರರ ಮತ್ತು ಕಂಪನಿಗಳ ವಿವರಗಳನ್ನೊಳಗೊಂಡ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ವಿವರಗಳನ್ನು ಅನುಬಂಧ-1 ಮತ್ತು ರಾಜ್ಯ ಹೆದ್ದಾರಿಗಳ ನಿರ್ವಹಣೆ ವಿವರಗಳನ್ನು ಅನುಬಂಧ-2ರಲ್ಲಿ ಲಗತ್ತಿಸಲಾಗಿದೆ. |
| ಆ) | ಕಲಬುರುಗಿ ನಗರವು ಸಂಚಾರ ದಟ್ಟಣೆಯಿಂದ ಕೂಡಿದ್ದು, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಸಂಚಾರ ದಟ್ಟಣೆ ನಿವಾರಿಸುವ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳು ಯಾವುವು ; | ಕಲಬುರಗಿ ನಗರದ ಬಹುತೇಕ ರಸ್ತೆಗಳು ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಗೆ ಒಳಪಡುತ್ತವೆ. ಕಲಬುರಗಿ ನಗರದ ಹಲವಾರು ರಸ್ತೆಗಳು ಸಂಚಾರ ದಟ್ಟಣೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>2022-23ನೇ ಸಾಲಿನಲ್ಲಿ KKRDB ಯೋಜನೆ ಅಡಿಯಲ್ಲಿ ಒಟ್ಟು ರೂ.38.00 ಕೋಟಿಗಳ ವೆಚ್ಚದಲ್ಲಿ ವರ್ತುಲ ರಸ್ತೆಗೆ 13 ಸ್ಥಳಗಳಲ್ಲಿ ಸರ್ವಿಸ್ ರಸ್ತೆಯನ್ನು ನಿರ್ಮಾಣ ಮಾಡಿ ಸಂಚಾರ ದಟ್ಟಣೆ ನಿವಾರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಈ ಸರ್ವಿಸ್ ರಸ್ತೆ ನಿರ್ಮಾಣ ಕಾಮಗಾರಿಗಳನ್ನು KKRDB ಅನುದಾನದ ಅಡಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗಿದೆ.<br>**ರಾಷ್ಟ್ರೀಯ ಹೆದ್ದಾರಿ ವಿಭಾಗಕ್ಕೆ ಸಂಬಂಧಿಸಿದಂತೆ:**<br>1) ಹಾಲಿ ಇರುವ ಕಲಬುರಗಿ ನಗರದ ವರ್ತುಲ ರಸ್ತೆಯ ಒಟ್ಟು ಉದ್ದ 23.40 ಕಿ.ಮೀ. ಇರುತ್ತದೆ.<br>2) ಅದರಲ್ಲಿ 11.20 ಕಿ.ಮೀ (ಹುಮನಾಬಾದ ಬೇಸ್ ಇಂದ ರಾಮಮಂದಿರ ವರೆಗೆ ವಯಾ ಖರ್ಗೆ ಪೆಟ್ರೋಲ್ ಬಂಕ್) ರಸ್ತೆಯು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಇವರ ಅಧೀನದಲ್ಲಿರುತ್ತದೆ.<br>3) ರಾಮ ಮಂದಿರದಿಂದ ಹೈಕೋರ್ಟ್ ಕ್ರಾಸ್‌ವರೆಗಿನ ರಸ್ತೆಯ ಉದ್ದ 3.2 ಕಿ.ಮೀ. ಇದ್ದು, ಕಲಬುರಗಿ ಮಹಾನಗರಪಾಲಿಕೆ ಇವರ ಅಧೀನದಲ್ಲಿರುತ್ತದೆ.<br>4) ಹೈಕೋರ್ಟ್ ಕ್ರಾಸ್‌ನಿಂದ ಹುಮನಾಬಾದ ಬೇಸ್‌ವರೆಗಿನ ರಸ್ತೆಯ ಉದ್ದ 9.00 ಕಿ.ಮೀ ಇದ್ದು, ಸದರಿ ರಸ್ತೆಯು ರಾಷ್ಟ್ರೀಯ ಹೆದ್ದಾರಿ ವಿಭಾಗ ಕಲಬುರಗಿ ಇವರ ಅಧೀನದಲ್ಲಿರುತ್ತದೆ.<br>ಈ ವಿಭಾಗದಲ್ಲಿ ಬರುವ 9.00 ಕಿ.ಮೀ. ವರ್ತುಲ ರಸ್ತೆಯಲ್ಲಿ ಸರ್ವಿಸ್ ರೋಡ್ ನಿರ್ಮಾಣ ಮಾಡುವ ಕಾಮಗಾರಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನದಡಿಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ಮಿಸಲಾಗುತ್ತಿದೆ. |

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
| --- | --- | --- |
| ಇ) | ಕಲಬುರುಗಿಯಲ್ಲಿ ಈಗಿರುವ ವರ್ತುಲ ರಸ್ತೆ ತುಂಬಾ ಸಂಚಾರ ದಟ್ಟಣೆ ಕೂಡಿದ್ದು, ಇದಕ್ಕೆ ಪರ್ಯಾಯವಾಗಿ ಇನ್ನೊಂದು ಹೊರ ವರ್ತುಲ ರಸ್ತೆ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ? | ಕಲಬುರಗಿ ನಗರಕ್ಕೆ ಪ್ರಸ್ತಾಪಿತ ಬೈಪಾಸ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿ ವಿಭಾಗ ಕಲಬುರಗಿ ವತಿಯಿಂದ ಯೋಜನಾ ವರದಿಯನ್ನು ಸಮಾಲೋಚಕರಿಂದ ತಯಾರಿಸಿದ್ದು, ವಿವರ ಈ ಕೆಳಗಿನಂತಿರುತ್ತದೆ;<br>1) ಸದರಿ ರಸ್ತೆಯು ರಾಷ್ಟ್ರೀಯ ಹೆದ್ದಾರಿ–150 (ಕಲಬುರಗಿ–ಅಫಜಲಪೂರ ಸೆಕ್ಷನ್) ರಿಂದ ರಾಷ್ಟ್ರೀಯ ಹೆದ್ದಾರಿ–50 (ಕಲಬುರಗಿ–ಜೇವರ್ಗಿ ಸೆಕ್ಷನ್) ವಯಾ ರಾಷ್ಟ್ರೀಯ ಹೆದ್ದಾರಿ–150 (ಕಲಬುರಗಿ–ಶಹಾಬಾದ ಸೆಕ್ಷನ್) ವರೆಗೆ ಇರುತ್ತದೆ.<br>2) ಸದರಿ ರಸ್ತೆಯ ಅಲೈನ್‌ಮೆಂಟ್ ಕೇಂದ್ರ ಭೂಸಾರಿಗೆ ಮಂತ್ರಾಲಯ ನವದೆಹಲಿ ರವರಿಂದ ದಿನಾಂಕ: 14.02.2017 ರಂದು ಅನುಮೋದನೆಯಾಗಿರುತ್ತದೆ. ಅದರ ಒಟ್ಟು ಉದ್ದ 41.43 ಕಿ.ಮೀ. ಇರುತ್ತದೆ.<br>3) ಸದರಿ ರಸ್ತೆಯ ಯೋಜನಾ ವರದಿಯನ್ನು ರೂ.1421.21 ಕೋಟಿಗಳ ಮೊತ್ತಕ್ಕೆ ಸಮಾಲೋಚಕರಿಂದ ತಯಾರಿಸಿ ಕೇಂದ್ರ ಭೂಸಾರಿಗೆ ಮಂತ್ರಾಲಯ ನವದೆಹಲಿ ರವರಿಗೆ ದಿನಾಂಕ:17.09.2016 ರಂದು ಸಲ್ಲಿಸಲಾಗಿತ್ತು. ಆದರೆ ಸದರಿ ಪ್ರಸ್ತಾವನೆಯನ್ನು ದಿನಾಂಕ:26.10.2018 ರಂದು ಹಿಂದಿರುಗಿಸಲಾಗಿದೆ.<br>4) ಪ್ರಸ್ತಾಪಿತ ರಸ್ತೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಯನ್ನು ರಾಜ್ಯ ಸರ್ಕಾರದಿಂದ ಕೇಂದ್ರ ಭೂಸಾರಿಗೆ & ಹೆದ್ದಾರಿಗಳ ಮಂತ್ರಾಲಯಕ್ಕೆ ದಿನಾಂಕ:09.08.2021 ಮತ್ತು 22.08.2022 ರಂದು ಸಲ್ಲಿಸಲಾಗಿದ್ದು, ಅನುಮೋದನೆಯು ಬಾಕಿ ಇರುತ್ತದೆ. |
| ಈ) | ಇದ್ದಲ್ಲಿ, ಇದಕ್ಕಾಗಿ ಭೂಸ್ವಾಧೀನ ಸೇರಿದಂತೆ ಯಾವ ಯಾವ ಕಾರ್ಯಗಳು ನಡೆಯುತ್ತಿವೆ ಹಾಗೂ ಈ ವರ್ತುಲ ರಸ್ತೆಯ ಉದ್ದ ಮತ್ತು ಅಗಲ ಎಷ್ಟು ಮತ್ತು ಇದರ ನಿರ್ಮಾಣಕ್ಕೆ ತಗಲುವ ಅಂದಾಜು ಮೊತ್ತ ಎಷ್ಟು? ಮತ್ತು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? (ಮಾಹಿತಿ ನೀಡುವುದು) | 1) ಸದರಿ ಪ್ರಸ್ತಾಪಿತ ಕಲಬುರಗಿ ಬೈಪಾಸ್ ರಸ್ತೆಯು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗದೇ ಇರುವುದರಿಂದ ಯಾವುದೇ ಕಾರ್ಯಗಳನ್ನು ಕೈಗೊಳ್ಳಲಾಗಿರುವುದಿಲ್ಲ.<br>2) ಪ್ರಸ್ತಾಪಿತ ಬೈಪಾಸ್ ರಸ್ತೆಯ ಯೋಜನಾ ವರದಿಯನ್ನು ಕೇಂದ್ರ ಭೂಸಾರಿಗೆ & ಹೆದ್ದಾರಿಗಳ ಮಂತ್ರಾಲಯಕ್ಕೆ ಅನುಮೋದನೆಗಾಗಿ ಮುಖ್ಯ ಇಂಜಿನೀಯರ್, ರಾಷ್ಟ್ರೀಯ ಹೆದ್ದಾರಿಗಳು ಬೆಂಗಳೂರು ರವರ ಪತ್ರ ಸಂಖ್ಯೆ: 2445, ದಿನಾಂಕ:17.09.2018 ರಂದು ಸಲ್ಲಿಸಲಾಗಿದೆ.<br>3) ಬೈಪಾಸ್ ರಸ್ತೆಯ ಉದ್ದ – 41.43 ಕಿ.ಮೀ.<br>4) ಬೈಪಾಸ್ ರಸ್ತೆಯ ಅಗಲ: 2x7.0 metre with paved shoulder of 2x1.5 metre.<br>5) ಅಂದಾಜು ಮೊತ್ತ ರೂ. 1421.21 ಕೋಟಿಗಳು.<br>6) ಸದರಿ ಕಾಮಗಾರಿಯು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ನಂತರ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಲೋಇ 150 ಸಿಐಎಸ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು